ದಿಃ05.11.2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ತಕರಾರುದಾರ ನಂ 2 ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರಿಂದ ಮುಂದುವರೆದ ಪಾಟೀ ಸವಾಲುಃ

16. ಅಸಲು ದಾವಾ ನಂ 77/95 ಇದರಲ್ಲಿ ಷಡ್ಯೂಲ್ ಐಟಂ ನಂ 2 ಜಮೀನು ಸರ್ವೆ ನಂ 32/ಪಿ ಕ್ಷೇತ್ರ 4 ಎಕರೆ 5 ಗುಂಟೆ ಇದರ ಚಕ್ಕುಬಂದಿಯನ್ನು ನಾನು ಗೇಣಿ ಮತ್ತು ಪಹಣಿ ಪತ್ರಿಕೆಯನ್ನು ನೋಡಿ ಉಲ್ಲೇಖಿಸಿರುತ್ತೇನೆ. ನಾನು ಹೇಳುವ ಹಾಗೆ ಗೇಣಿ ಮತ್ತು ಪಹಣಿ ಪತ್ರಿಕೆಯಲ್ಲಿ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ ಯಾವುದೇ  ಚಕ್ಕುಬಂದಿ ಉಲ್ಲೇಖಿಸಿಲ್ಲ ಅನ್ನುವುದು ಸರಿಯಲ್ಲ. ಜಮೀನಿನ ದಕ್ಷಿಣ ದಿಕ್ಕಿನಲ್ಲಿರುವ ನಾಗಪ್ಪ ಅಂದರೆ ನನ್ನ ಮಾವನಾದ ಬೀರಪ್ಪ ಇತನ ತಮ್ಮನಾಗಬೇಕು ಅಂದರೆ ಸರಿ. ನನ್ನ ಮಾವ ಬೀರಪ್ಪ ಮತ್ತು ಆತನ ತಮ್ಮ ನಾಗಪ್ಪ ಇವರಿಬ್ಬರು ಬೇರೆಯಾದ ಕುರಿತು ಮೇಲ್ಕಂಡ ಅಸಲು ದಾವೆಯಲ್ಲಿ ನಾನು ದಾಖಲೆಯನ್ನು ಹಾಕಿರುವುದಿಲ್ಲ. ಆ ದಾಖಲೆಯನ್ನು ನಾನು ದಾವೆಯಲ್ಲಿ ಹಾಕದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೇಲ್ಕಂಡ ಅಸಲು ದಾವೆಯಲ್ಲಿ ಡಿಕ್ರಿಯಾದ ಪ್ರಕಾರ 4 ಎಕರೆ 5 ಗುಂಟೆ ಜಮೀನಿನಲ್ಲಿ ನನ್ನ ಪಾಲಿಗೆ 1 ಎಕರೆ 5 ಗುಂಟೆ ಜಮೀನು ಬಂದಿದ್ದು ಅದರ ಚಕ್ಕುಬಂದಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಉಳಿದ ಜಮೀನು, ಉತ್ತರಕ್ಕೆ ಕರಿಗೊಂಡ್ಯಪ್ಪ ಬೀರಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ ನಾಗಪ್ಪ ಇವರ ಜಮೀನು ಇರುತ್ತದೆ. ಅಂತಿಮ ಡಿಕ್ರಿಯಲ್ಲಿ ಮೇಲ್ಕಂಡ ಚಕ್ಕುಬಂದಿಯನ್ನು ಉಲ್ಲೇಖಿಸಿಲ್ಲ ಅಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ನ್ಯಾಯಾಲಯದಿಂದ ಜಾರಿಯಾದ ಡೆಲಿವರಿ ವಾರೆಂಟ್‌ನಲ್ಲೂ  ಮೇಲ್ಕಂಡ ಚಕ್ಕುಬಂದಿ ಹೇಳಿಲ್ಲ ಅಂದರೆ ಸುಳ್ಳು. ನ್ಯಾಯಾಲಯದಿಂದ ಜಾರಿಯಾಗಿರುವ ಡೆಲಿವರಿ ವಾರಂಟ್‌ನಲ್ಲಿ 4 ಎಕರೆ 5 ಗುಂಟೆಗೆ ಸಂಬಂಧಪಟ್ಟಂತೆ ಚಕ್ಕುಬಂದಿಯನ್ನು ಹಾಕಿದ್ದು ವಿನಃ 1 ಎಕರೆ 5 ಗುಂಟೆಗೆ ಚಕ್ಕುಬಂದಿ ಹೇಳಿಲ್ಲ ಅನ್ನುವುದು ಸರಿಯಲ್ಲ.  ಡೆಲಿವರಿ ವಾರಂಟ್‌ನ್ನು ನಿಸಿ-1 ಎಂದು ಗುರ್ತಿಸಲಾಯಿತು. ಈ ದಾಖಲೆಯಲ್ಲಿ 4 ಎಕರೆ 5 ಗುಂಟೆಗೆ ಸಂಬಂಧಪಟ್ಟಂತೆ ಚಕ್ಕುಬಂದಿಯನ್ನು ಕಾಣಿಸಿದ್ದು ವಿನಃ 1 ಎಕರೆ 5 ಗುಂಟೆಗೆ ಚಕ್ಕು ಬಂದಿ ಕಾಣಿಸಿಲ್ಲ ಅನ್ನುವುದು ಸರಿಯಲ್ಲ.  ಇದರಲ್ಲಿ ಕಾಣಿಸಿರುವ ಚಕ್ಕುಬಂದಿ ವಾಸ್ತವ್ಯದಲ್ಲಿ 5

ಎಕರೆ 3 ಗುಂಟೆ ಜಮೀನಿಗೆ ಸಂಬಂಧಪಟ್ಟಿದ್ದು ಅನ್ನುವುದು ಸರಿಯಲ್ಲ. 17. ಮೇಲೆ ಹೇಳಿದ ಹಾಗೆ ದಕ್ಷಿಣ ದಿಕ್ಕಿನಲ್ಲಿರುವ ನಾಗಪ್ಪ ಇತನ ಪಾಲಿಗೆ ಕೂಡ 5 ಎಕರೆ 3 ವರೆ ಗುಂಟೆ ಆತನ ಪಾಲಿಗೆ ಬಂದಿರುತ್ತದೆ ಅಂದರೆ ಸುಳ್ಳು. ಜಮೀನುಎ ಸರ್ವೆ ನಂ 32 ಇದರ ಕ್ಷೇತ್ರ 10 ಎಕರೆ 7 ಗುಂಟೆ ಇದರ ಪೈಕಿ ಕಿರ್ಲೋಸ್ಕರ ಶಿಕ್ಷಣ ಟ್ರಸ್ಟ್ನವರು ಕ್ಷೇತ್ರ 1 ಎಕರೆ 38 ಗುಂಟೆ ಜಮೀನನ್ನು ಸ್ವಾದೀನ ಪಡಿಸಿಕೊಂಡ ನಂತರ ಉಳಿದ ಜಮೀನಿನ ಪೈಕಿ 4 ಎಕರೆ 3 ವರೆ ಗುಂಟೆ ನನ್ನ ಮಾವನಾದ ಬೀರಪ್ಪ ಇವರದು ಮತ್ತು ಉಳಿದ 4 ಎಕರೆ 3 ವರೆ ಗುಂಟೆ ಜಮೀನು ಬೀರಪ್ಪನ ತಮ್ಮನಾದ ನಾಗಪ್ಪ ಇತನದು ಅನ್ನುವುದು ಸರಿಯಲ್ಲ.

18. ನನ್ನ ಮಾವನಾದ ಬೀರಪ್ಪ ಮತ್ತು ಆತನ ತಮ್ಮನಾದ ನಾಗಪ್ಪ ಇವರ ನಡುವೆ ಪಾಲು ವಿಭಾಗ ಆಗುವುದಕ್ಕಿಂತ ಮುಂಚೆ ಮೇಲೆ ಹೇಳಿದ 1 ಎಕರೆ 38 ಗುಂಟೆ ಜಮೀನು ಕಿರ್ಲೋಸ್ಕರ್ ಶಿಕ್ಷಣ ಟ್ರಸ್ಟ್ನವರು ಸ್ವಾದೀನ ಪಡಿಸಿಕೊಂಡಿರುತ್ತಾರೆ ಅಂದರೆ ಸರಿ.

19. ಈಗ ನಾನು ನಿ.ಆರ್-1 ಫೈನಲ್ ಡಿಕ್ರಿಯ ದೃಡೀಕೃತ ನಕಲು ನೋಡುತ್ತಿದ್ದೇನೆ. ಮೇಲ್ಕಂಡ 1 ಎಕರೆ 5 ಗುಂಟೆ ಜಮೀನಿಗೆ ನಾನು ಹೇಳಿದ ಚಕ್ಕುಬಂದಿಯನ್ನು ನಿಆರ್-1 ರಲ್ಲಿ ಹೇಳಿಲ್ಲ ಅಂದರೆ ಸುಳ್ಳು. ಕಮಿಷನರ್ ಸಲ್ಲಿಸಿರುವ ಸ್ಕೆಚ್ನಲ್ಲೂ ಸಹ 1 ಎಕರೆ 5 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಚಕ್ಕುಬಂದಿ ಹೇಳಿಲ್ಲ ಅಂದರೆ ಸುಳ್ಳು. ಕಮಿಷನರ್ ಇವರು ತಮ್ಮ ಸ್ಕೆಚ್ನಲ್ಲಿ 10 ಎಕರೆ 7 ಗುಂಟೆ ಜಮೀನನ್ನು ತೋರಿಸಿರುತ್ತಾರೆ ಅಂದರೆ ಸರಿ. ಸದರಿ ಸ್ಕೆಚ್ನಲ್ಲಿ ಕಮಿಷನರ್ ಇವರು ಕಿರ್ಲೋಸ್ಕರ್ ಶಿಕ್ಷಣ ಟ್ರಸ್ಟ್ನವರಿಗೆ 1 ಎಕರೆ 38 ಗುಂಟೆ ಜಮೀನು ಹೋದ ಬಗ್ಗೆ ಅದರಲ್ಲಿ ತೋರಿಸಿಲ್ಲ ಎಂಬ ಪ್ರಶ್ನೆಗೆ ಅದು ಸುಳ್ಳು ಇದ್ದು ನನ್ನ ಮಾವನವರಿಗೆ ಗೊತ್ತು ಎಂದು ಹೇಳುತ್ತಾರೆ. ಮೇಲೆ ಹೇಳಿದ ಹಾಗೆ ನನ್ನ ಪಾಲಿಗೆ ಬಂದ 1 ಎಕರೆ 5 ಗುಂಟೆ ಜಮೀನಿಗೂ ಸಹ ಕಮಿಷನರ್ ಇವರು ತಮ್ಮ ಸ್ಕೆಚ್ನಲ್ಲಿ ಚಕ್ಕುಬಂದಿ ತೋರಿಸಿಲ್ಲ ಅಂದರೆ ಸರಿ. ಇದನ್ನು ನಿ.ಆರ್-3 ಎಂದು ಗುರ್ತಿಸಲಾಗಿದೆ. ಜಮೀನು ಸರ್ವೆ ನಂ 32 ರಲ್ಲಿ 1 ಎಕರೆ 38 ಗುಂಟೆ ಕಿರ್ಲೋಸ್ಕರ್ ಶಿಕ್ಷಣ ಟ್ರಸ್ಟ್ನವರಿಗೆ ಮತ್ತು ನನ್ನ ಮಾವ ಹಾಗೂ ಇತರರು ಕೂಡಿಕೊಂಡು 1 ಎಕರೆ 20 ಗುಂಟೆ ಜಮೀನನ್ನು ಪ್ರಸ್ತುತ ತಕರಾರುದಾರ ನಂ 2 ಇತನ ತಂದೆಗೆ ಮಾರಾಟ ಮಾಡಿರುವುದನ್ನು ಮುಚ್ಚಿಟ್ಟು ನಾನು ಡಿಕ್ರಿ ಪಡೆದುಕೊಂಡಿರುತ್ತೇನೆ ಅಂದರೆ ಸುಳ್ಳು.

ಮೇಲ್ಕಂಡ 1 ಎಕರೆ 38 ಗುಂಟೆ ಮತ್ತು 1 ಎಕರೆ 20 ಗುಂಟೆ ಇವೆರಡು ಜಮೀನುಗಳು ಕೃಷಿಯೇತರ ಭೂಮಿಗಳನ್ನಾಗಿ ಪರಿವರ್ತಿಸಲಾಗಿದೆ ಅಂದರೆ ಸುಳ್ಳು. ನಾನು ಸಲ್ಲಿಸಿದ ಭಾವಚಿತ್ರಗಳಲ್ಲಿ ಕಾಣುವ ಹಾಗೆ ಕಲ್ಲುಗಳನ್ನು ಸೈಟುಗಳನ್ನಾಗಿ ಪರಿವರ್ತಿಸಿದ ನಂತರ ಹಾಕಲಾಗಿದೆ ಅಂದರೆ ಸುಳ್ಳು. ಭಾವಚಿತ್ರಗಳನ್ನು ಈಗಾಗಲೇ ನಿ.ಆರ್-30 ರಿಂದ ನಿ.ಆರ್-34 ಎಂದು ಗುರ್ತಿಸಲಾಗಿದೆ. ಸಾಕ್ಷಿದಾರರು ಮುಂದುವರೆದು ಹೇಳುವುದು ಏನೆಂದರೆ ಅದರಲ್ಲಿ ಕಾಣುವ ಕಲ್ಲುಗಳನ್ನು ಸರ್ವೆಯರ್ ಹಾಕಿರುತ್ತಾರೆ.

20. ನಿಆರ್-7 ಭಾವಚಿತ್ರದಲ್ಲಿ ಕಿರ್ಲೋಸ್ಕರ್ ಶಿಕ್ಷಣ ಟ್ರಸ್ಟ್‌ನ ಬಿಲ್ಡಿಂಗ್ ಕಾಣುತ್ತದೆ ಅಂದರೆ ಸರಿ. ಆ ಕಟ್ಟಡದ ಪೂರ್ವ ಭಾಗದಲ್ಲಿರುವ ಜಮೀನು ಸರ್ವೆ ನಂ 32 ರಲ್ಲಿ ಉಳಿದಂತಹ ಜಮೀನು ಅಂದರೆ ಸರಿ. ಸದರಿ ಕಟ್ಟಣದ ಪಶ್ಚಿಮ ದಿಕ್ಕಿನಲ್ಲಿ ಹರಿಹರ-ಹರಪನಹಳ್ಳಿ ರಸ್ತೆ ಇದೆ ಅಂದರೆ ಸರಿ. ನಾನು ನನ್ನ ವಾದ ಪತ್ರದಲ್ಲಿ, ಎಪ್.ಡಿ.ಪಿ ಅರ್ಜಿಯಲ್ಲಿ ಮತ್ತು ಪ್ರಸ್ತುತ ಅರ್ಜಿಯಲ್ಲಿ ಪಶ್ಚಿಮ ಭಾಗದ ಚಕ್ಕುಬಂದಿಯನ್ನು ತಪ್ಪಾಗಿ ತೋರಿಸಿರುತ್ತೇನೆ ಅಂದರೆ ಸುಳ್ಳು. ಸರ್ವೆ ನಂ 32 ಕ್ಷೇತ್ರ 10 ಎಕರೆ 7 ಗುಂಟೆ ಇದರ ಪಶ್ಚಿಮ ಭಾಗದ 1 ಎಕರೆ 38 ಗುಂಟೆ ಜಮೀನು ಕಿರ್ಲೋಸ್ಕರ್ ಶಿಕ್ಷಣ ಟ್ರಸ್ಟ್‌ಗೆ ಹೋಗಿರುವುದರಿಂದ ನಾನು ಹೇಳುವ ಹಾಗೆ ನನ್ನ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಹರಿಹರ-ಹರಪನಹಳ್ಳಿ ರಸ್ತೆ ಬರುವುದಿಲ್ಲ ಅನ್ನುವುದು ಸರಿಯಲ್ಲ.

21. ನನ್ನ ಮಾವನಾದ ಬೀರಪ್ಪ, ಇತನ ಮೊದಲನೆ ಮಗನಾದ ಕೆಂಚಪ್ಪ ಮತ್ತು ಮೂರನೇ ಮಗನಾದ ಬಸವರಾಜಪ್ಪ ಇವರೆಲ್ಲರೂ ಕೂಡಿಕೊಂಡು 1 ಎಕರೆ 20 ಗುಂಟೆ ಜಮೀನನ್ನು ದಿ:26.08.1980 ರಂದು ರಜಿಸ್ಟರ್ಡ್ ಕ್ರಯ ಪತ್ರದ ಮುಖಾಂತರ ಪ್ರಸ್ತುತ ತಕರಾರುದಾರ ನಂ 2 ಇತನ ತಂದೆಗೆ ಮತ್ತು ಇತರರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸುಳ್ಳು. ಕ್ರಯಪತ್ರದ ಪ್ರಕಾರ ಪೂರ್ವಕ್ಕೆ ಇದೇ ನಂಬರು ಪೈಕಿ ನಮ್ಮ ಬಾಬ್ತು ಉಳಿದ ಜಮೀನು ಮತ್ತು ಪಶ್ಚಿಮಕ್ಕೆ ಮೈಸೂರ್ ಕಿರ್ಲೋಸ್ಕರ್ ಕಂಪನಿ ಶಿಕ್ಷಣ ಟ್ರಸ್ಟ್‌ನ ಪರವಾಗಿ ಸಿ.ಎ ಪಳನಿಕರ್ ಇವರಿಗೆ ಅಕ್ವೆರ್ ಆಗಿ ಕ್ರಯವಾದ ಜಮೀನು ಈ ಪ್ರಕಾರವಾಗಿ ಚಕ್ಕುಬಂದಿ ಬರೆಯಲಾಗಿದೆ ಅಂದರೆ ಸುಳ್ಳು. ಕಿರ್ಲೋಸ್ಕರ್ ಕಂಪನಿಯವರಿಗೆ ಪಶ್ಚಿಮ ಭಾಗದಲ್ಲಿ 1 ಎಕರೆ 38 ಗುಂಟೆ ಜಮೀನು ಹೋಗಿರುವುದರಿಂದ ಉಳಿದ 4 ಎಕರೆ 5 ಗುಂಟೆ ಜಮೀನಿಗೆ ಪಶ್ಚಿಮ ದಿಕ್ಕಿನಲ್ಲಿ ಹರಿಹರ-ಹರಪನಹಳ್ಳಿ ರಸ್ತೆ ಇದೆ ಎಂದು ಸುಳ್ಳು ತೋರಿಸಿರುತ್ತೇನೆ ಅಂದರೆ ಸರಿಯಲ್ಲ.

**ಈ ಸಮಯದಲ್ಲಿ ತಕರಾರುದಾರರ ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.